# ಕರ್ಮಯೋಗಕ್ಕೆ ಸಂಬಂಧಿಸಿದಂತೆ ಕೆಲವು ಪ್ರಾಯೋಗಿಕ ಸಲಹೆಗಳು

ಈ ಭಾಗವನ್ನು ಪೂಜ್ಯ ಸ್ವಾಮಿ ಭಜನಾನಂದಜಿಯವರು ಮೂಲಲೇಖನದ ಪರಿಶಿಷ್ಟವಾಗಿ ಕಳಿಸಿಕೊಟ್ಟಿರುವರು. ಇದನ್ನು ಕನ್ನಡಕ್ಕೆ ಅನುವಾದಿಸಿದವರು ಕುಮಾರಿ ಸ್ವರ್ಣಗೌರಿ.

೧. **ಕ**ರ್ಮಯೋಗದ ಗುರಿಯೇ ವೈಯಕ್ತಿಕ ಮುಕ್ತಿ ಮತ್ತು ಜಗತ್ತಿನ ಹಿತಸಾಧನೆ. ಎಲ್ಲ ಕೆಲಸಗಳ ಹಿನ್ನೆಲೆಯಲ್ಲಿ ಈ ಎರಡೂ ದೃಷ್ಟಿಗಳಿರಲಿ.

೨. ಎಲ್ಲ ಕೆಲಸಗಳನ್ನು ಮಾಡುವಾಗ ಅವು ನಮ್ಮನ್ನು ಬಂಧಿಸದಂತೆ ನೋಡಿಕೊಳ್ಳಬೇಕು. ಇದಕ್ಕೆ ಬಂಧನ ಎಂದರೇನು ಎಂಬುದರ ಅರಿವು ನಮಗಿರಬೇಕು. ಬಂಧನವು ಎರಡು ರೀತಿಯ ವ್ಯಾಮೋಹಗಳಿಂದ ಉಂಟಾಗುತ್ತದೆ : ಒಂದು ವಿಷಯವಸ್ತುಗಳಲ್ಲಿನ ವ್ಯಾಮೋಹ ಹಾಗೂ ಎರಡನೆಯದಾಗಿ ಕರ್ಮಫಲದ ಮೇಲಿನ ವ್ಯಾಮೋಹ. ಈ ಎರಡೂ ವ್ಯಾಮೋಹಗಳನ್ನು ತ್ಯಜಿಸಿದಾಗ ಮಾತ್ರವೇ ಕೆಲಸವು ಬಂಧನಕ್ಕೆ ಕಾರಣವಾಗುವುದಿಲ್ಲ.

೩. **ವ್ಯಾ**ಮೋಹವನ್ನು ತ್ಯಜಿಸುವುದರೊಂದಿಗೆ, ನಾವು ಮಾಡುವ ಕೆಲಸಗಳಿಂದ ಜನರಿಗೆ ಒಳಿತಾಗುವುದರ ಕಡೆ ಕಣ್ಣಿಟ್ಟಿರಬೇಕು. ಅಂದರೆ ಜನರ ಮೇಲಿನ ನಿಃಸ್ವಾರ್ಥ ಪ್ರೀತಿಯಿಂದ ಕೆಲಸವನ್ನು ಮಾಡಬೇಕು.

೪. **ವೈ**ರಾಗ್ಯ ಹಾಗೂ ಪ್ರೀತಿಯ ನಡುವಿನ ದ್ವಂದ್ವವನ್ನು, "ಎಲ್ಲ ಜೀವಿಗಳೂ ಆ ಪರಮಾತ್ಮನ ಒಂದು ಅಂಶ" ಎಂಬ ಅರಿವಿನಿಂದ ಮಾತ್ರವೇ ಹೋಗಲಾಡಿಸಬಹುದು.

೫. ಎಲ್ಲ ಕೆಲಸಗಳನ್ನು ಎಲ್ಲ ಜೀವಿಗಳಲ್ಲೂ ನೆಲೆಸಿರುವ ಆ ಪರಮಾತ್ಮನ ಸೇವೆ ಎಂದು ಮಾಡಬೇಕು ಅಥವಾ ವಿರಾಟ್ ಯಜ್ಞದಲ್ಲಿ ಭಾಗವಹಿಸುತ್ತಿರುವೆವು ಎಂಬ ದೃಷ್ಟಿಯಿಂದ ಮಾಡಬೇಕು. ಅರ್ಥಾತ್, ಎಲ್ಲ ಕೆಲಸಗಳನ್ನೂ ದೇವರ ಮೇಲಿನ ಭಕ್ತಿಯಿಂದ ಅಥವಾ ಆತ್ಮಜ್ಞಾನದಿಂದ ಮಾಡಬೇಕು. ಮನುಷ್ಯನಿಗೆ ದೇವರೊಡನೆ ಇರುವ ಸಂಬಂಧವನ್ನು ದೃಢಪಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡುವುದೇ ಕರ್ಮದ ಮುಖ್ಯ ಗುರಿ.

೬. **ಉ**ಳಿದೆಲ್ಲ ಯೋಗಗಳಂತೆ ಕರ್ಮಯೋಗಕ್ಕೂ ತರಬೇತಿ, ಶಿಸ್ತು ಹಾಗೂ ತೀವ್ರವಾದ ವ್ಯಾಕುಲತೆ ಬೇಕು.

೭. ಎಲ್ಲ ಕೆಲಸಗಳನ್ನು ಯೋಗಿಯಂತೆ ಮಾಡಿ, ಭೋಗಿಯಂತಲ್ಲ; ಒಡೆಯನಂತೆ ಮಾಡಿ, ಆಳಿನಂತೆ ಅಥವಾ ಗುಲಾಮನಂತಲ್ಲ.

೮. ಎಲ್ಲರನ್ನು ದಿವ್ಯಾತ್ಮಗಳಾಗಿ ಕಾಣಿರಿ. ಆದರೆ ಸುಪ್ತಾವಸ್ಥೆಯನ್ನೇ ವ್ಯಕ್ತಾವಸ್ಥೆಯೆಂದು ತಪ್ಪು ಭಾವಿಸಬೇಡಿ. ರಾಗ ದ್ವೇಷಾದಿಗಳ ಸತ್ಯತೆಯನ್ನೂ ಅವುಗಳ ಶಕ್ತಿಯನ್ನೂ ಕಡೆಗಣಿಸಬೇಡಿ. ಎಲ್ಲರಲ್ಲೂ ಒಂದೇ ದಿವ್ಯಾತ್ಮ ಹುದುಗಿದ್ದರೂ, ಆ ದಿವ್ಯತೆಯ ಅಭಿವ್ಯಕ್ತಿ ಎಲ್ಲರಲ್ಲೂ ಒಂದೇ ಸಮವಿರುವುದಿಲ್ಲ. ಆದ್ದರಿಂದ ದುಷ್ಟಪ್ರವೃತ್ತಿಯ ವ್ಯಕ್ತಿಗಳೊಡನೆ ಹಾಗೂ ವಿಷಮವಾದ ಸನ್ನಿವೇಶಗಳಲ್ಲಿ ಕೆಲಸ ಮಾಡುವಾಗ ಎಚ್ಚರಿಕೆಯಿಂದಿರಬೇಕು.

೯. **ಮ**ಹಾಮಾಯೆಯ ಬಲೆ ಎಷ್ಟು ಸೂಕ್ಷ್ಮ ಹಾಗೂ ವ್ಯಾಪಕವಾದುದೆಂದರೆ, ಯಾರನ್ನು ಬೇಕಾದರೂ ಯಾವಾಗ ಬೇಕಾದರೂ ಮೋಹಗೊಳಿಸಿ ಆ ಬಲೆಯಲ್ಲಿ ಕೆಡವಬಹುದು. ಆದ್ದರಿಂದ ಯಾವಾಗಲೂ ಎಚ್ಚರಿಕೆಯಿಂದಿರಬೇಕು. ಕೆಲಸದಲ್ಲಿ ತೊಡಗಿರುವಾಗಲೂ ಮನಸ್ಸಿನ ಒಂದು ಭಾಗ ಸದಾ ಆತ್ಮ-ವಿಶ್ಲೇಷಣೆ ಹಾಗೂ ವಿವೇಕಾಭ್ಯಾಸಗಳಲ್ಲಿ ನಿರತವಾಗಿರಬೇಕು.

೧೦. **ಕೆ**ಲಸ ಪ್ರಾರಂಭ ಮಾಡುವ ಮುನ್ನ ಕೆಲಸವನ್ನು ಶ್ರದ್ಧೆಯಿಂದ ಆದರೆ ಅನಾಸಕ್ತಿಯಿಂದ ಮಾಡಲು ಬೇಕಾಗುವ ಜ್ಞಾನ ಹಾಗೂ ಶಕ್ತಿ ನೀಡೆಂದು ತೀವ್ರವಾಗಿ ಪ್ರಾರ್ಥನೆ ಮಾಡಿ.

೧೧. ಎಲ್ಲಕ್ಕಿಂತಲೂ ಮಿಗಿಲಾಗಿ ಪ್ರತಿದಿನ ಬೆಳಿಗ್ಗೆ ಹಾಗೂ ಸಾಯಂಕಾಲ ಕನಿಷ್ಠ ಅರ್ಧಗಂಟೆಯಾದರೂ ಧ್ಯಾನ ಮಾಡಬೇಕು. ಮನಸ್ಸು ಅಲೆದಾಡುತ್ತಿದ್ದರೂ ಧ್ಯಾನಮಾಡುವ ಅಭ್ಯಾಸವನ್ನು ಒಂದು ದಿನವೂ ಬಿಡದೆ ನಿರಂತರವಾಗಿ ಮುಂದುವರಿಸಿಕೊಂಡು ಹೋಗಬೇಕು. ಧ್ಯಾನಕ್ಕೆ ಮುಂಚೆ ತೀವ್ರವಾಗಿ ಪ್ರಾರ್ಥನೆ ಮಾಡಿದರೆ ಮನಸ್ಸು ಅಲೆದಾಡುವುದರ ಸಮಸ್ಯೆ ಬಹುತೇಕ ಕಡಿಮೆಯಾಗುತ್ತದೆ. ಧ್ಯಾನದಿಂದ ದೊರೆತ ಏಕಾಗ್ರತೆ ಹಾಗೂ ಆತ್ಮನಿರೀಕ್ಷಣೆ ಕರ್ಮಯೋಗವನ್ನು ಸರಿಯಾದ ರೀತಿಯಲ್ಲಿ ಮಾಡಲು ಬಹಳ ಸಹಕಾರಿಯಾಗುತ್ತದೆ. ಪ್ರಾರಂಭದಲ್ಲಿ ಕೆಲಸ ಹಾಗೂ ಧ್ಯಾನ ಎರಡೂ ಒಟ್ಟೊಟ್ಟಿಗೇ ನಡೆಯಬೇಕು. ಧ್ಯಾನದಲ್ಲಿ ದೊರೆತ ಆಂತರಿಕ ಶಾಂತಿ ಹಾಗೂ ಸ್ಥಿರತೆಯನ್ನು ಕೆಲಸ ಮಾಡುತ್ತಿರುವಾಗಲೂ ಕಾಪಾಡಿಕೊಳ್ಳಬೇಕು.

೧೨. **ಕ**ರ್ಮಯೋಗದಲ್ಲಿ ಮುಂದುವರಿಯುತ್ತಿರುವ ಒಂದು ಚಿಹ್ನೆಯೆಂದರೆ ಮನಸ್ಸು ಪರಿಶುದ್ಧತೆಯನ್ನು ಹೊಂದುವುದು. ಮತ್ತೊಂದು ಚಿಹ್ನೆ, ಮಾನಸಿಕ ಒತ್ತಡ ಹಾಗೂ ಪ್ರಯಾಸಗಳು ಕಡಿಮೆಯಾಗುತ್ತಿರುವುದರ ಅನುಭವ. ಮನಸ್ಸು ನಿರ್ಮಲವಾಗಿ ಮಾನಸಿಕ ಒತ್ತಡಗಳಿಂದ ಮುಕ್ತವಾಗಿರುವ ಬದಲು ಇನ್ನಷ್ಟು ಕಲ್ಮಷಗಳನ್ನು ಶೇಖರಿಸಿಕೊಂಡು ಹೆಚ್ಚೆಚ್ಚು ಒತ್ತಡಗಳಿಂದ ಮನಸ್ಸು ಬಳಲುತ್ತಿದ್ದರೆ, ಕೆಲಸ ಮಾಡುವ ವಿಧಾನದಲ್ಲಿ ಎಲ್ಲೋ ತಪ್ಪಾಗಿದೆ ಎಂದು ತಿಳಿಯಬೇಕು.

೧೩. **ಕ**ರ್ಮಯೋಗದ ವಿಷಯದಲ್ಲಿ ಏನು ಮಾಡುವೆವು ಎಂಬುದು ಮುಖ್ಯವಲ್ಲ, ಹೇಗೆ ಮಾಡುವೆವು ಎಂಬುದೇ ಮುಖ್ಯ. ಕರ್ಮಯೋಗದಲ್ಲಿ ನೀಚ ಹಾಗೂ ಉಚ್ಚ, ಪ್ರಾಪಂಚಿಕ ಹಾಗೂ ಪಾವಿತ್ರ್ಯದ ಕೆಲಸಗಳೆಂಬ ತಾರತಮ್ಯವಿಲ್ಲ. ಸ್ವಾಮಿ ವಿವೇಕಾನಂದರು ಹೇಳಿರುವಂತೆ "ಚಪ್ಪಲಿ ಹೊಲೆಯುವುದರಿಂದ ಹಿಡಿದು ಚಂಡೀ ಪಠನದವರೆಗೂ" ಎಲ್ಲ ಕೆಲಸಗಳು ಪವಿತ್ರವಾದವುಗಳೇ.

೧೪. **ನಿ**ಮ್ಮ ಸ್ವಭಾವಕ್ಕೆ ಹೊಂದಿಕೆಯಾಗುವಂತಹ ಕೆಲಸವನ್ನು ಆರಿಸಿಕೊಳ್ಳಿ. ನಿಮಗೆ ಬೇಕಾದ ಕೆಲಸವನ್ನು ಆರಿಸಿಕೊಳ್ಳುವ ಅವಕಾಶ ನಿಮಗೆ ಇಲ್ಲದಿದ್ದರೆ, ನಿಮಗೆ ದೊರೆತ ಕೆಲಸವನ್ನೇ ಅರ್ಥಪೂರ್ಣವಾಗುವಂತೆ ಮಾಡಿಕೊಳ್ಳಬೇಕು.

೧೫. **ನಿ**ಮ್ಮ ಬಾಹ್ಯ ಜೀವನವು ಆಂತರಿಕ ಜೀವನದ ಒಂದು ಅಭಿ ವ್ಯಕ್ತಿಯಾಗಬೇಕು. ಬಾಹ್ಯ ಮತ್ತು ಆಂತರಿಕ ಬದುಕು ಇಬ್ಬಗೆಯಾಗದಂತೆ ನೋಡಿಕೊಳ್ಳಬೇಕು. ಅವಿಭಾಜ್ಯವಾದ ನಿಮ್ಮ ಸಂಪೂರ್ಣ ಬದುಕು ನಿಮ್ಮ ಗುರಿಸಾಧನೆಗೆ ಸಮರ್ಪಿತವಾಗಲಿ.

೧೬. **ನೀ**ವು ಮಾಡುವ ಕೆಲಸಗಳೆಲ್ಲವೂ ಅಚ್ಚುಕಟ್ಟಾಗಿರಲಿ. ಕೆಲಸದಲ್ಲಿ ದಕ್ಷರಾಗಿ. ಅಸಡ್ಡೆ, ಅನ್ಯಮನಸ್ಕತೆ, ಎಡವಟ್ಟು, ಹಾಗೂ ವ್ಯರ್ಥಕಾಲಹರಣಕ್ಕೆ ಆಸ್ಪದ ನೀಡಬೇಡಿ.

೧೭. **ಯಾ**ಂತ್ರಿಕವಾಗಿ ಕೆಲಸಮಾಡುವುದನ್ನು ತೊರೆಯಿರಿ. ಪ್ರತಿಯೊಂದು ಕೆಲಸಕ್ಕೂ ನಿಮ್ಮದೇ ಆದ ಕೊಡುಗೆಯನ್ನು ನೀಡಿದಾಗ ಕೆಲಸವನ್ನು ರಚನಾತ್ಮಕವಾಗಿ ಮಾಡಬಹುದು.

೧೮. **ಗ**ಟ್ಟಿಯಾದ ನೈತಿಕ ತಳಪಾಯವಿಲ್ಲದಿದ್ದಲ್ಲಿ ಕರ್ಮಯೋಗವು ಅಸಾಧ್ಯ. ಸದಾಕಾಲವೂ ಕೆಲವು ನೈತಿಕ ನಿಯಮಗಳನ್ನು ಅನುಸರಿಸಿ. ನೀವೆಸೆಗುವ ಕರ್ಮಗಳೆಲ್ಲ ಆ ನಿಯಮಗಳಿಗನುಸಾರವಾಗಿದ್ದು, ನೀತಿಬದ್ಧವಾಗಿರುವಂತೆ ಎಚ್ಚರ ವಹಿಸಿ.

೧೯. **ಯಾ**ವಾಗಲೂ ಸ್ವಂತಸುಖವನ್ನು ಬದಿಗಿಟ್ಟು ಇತರರ ಹಿತಾಸಕ್ತಿಗಳ ಕಡೆ ಗಮನವಿಡಿ. ಸೇವೆಯ ಹೆಸರಿನಲ್ಲಿ ಇತರರ, ವಿಶೇಷವಾಗಿ ಬಡಜನರ ಶೋಷಣೆಯಾಗದಂತೆ ನೋಡಿಕೊಳ್ಳಿ.

೨೦. **ನಿ**ಮ್ಮ ಅಂತಃಸಾಕ್ಷಿಗೆ ವಿರುದ್ಧವಾಗಿ ಏನನ್ನೂ ಮಾಡಬೇಡಿ. ನಿಮ್ಮ ಆತ್ಮಗೌರವಕ್ಕೆ ಧಕ್ಕೆ ತರುವಂತಹ ಯಾವುದೇ ಕೆಲಸವನ್ನೂ ಮಾಡಬೇಡಿ. ಆತ್ಮಗೌರವ ಹಾಗೂ ಅಹಂಕಾರವನ್ನು ಮರೆಯುವುದು ಇವೆರಡರ ನಡುವೆ ಉತ್ತರ ದಕ್ಷಿಣ ಧ್ರುವಗಳಷ್ಟು ಅಂತರವಿದೆ. ಅಹಂಕಾರರಹಿತರಾಗಿ ಉನ್ನತವಾದ ಆತ್ಮಗೌರವವನ್ನು ವರ್ಧಿಸಿಕೊಳ್ಳಿ.

೨೧. **ಅ**ಸೂಯೆ ಹಾಗೂ ಸೇಡಿನ ಮನೋಭಾವದಿಂದ ಮುಕ್ತರಾಗಿ. ಕರ್ಮನಿಯಮವು ಕೆಲವರ ಉದ್ಧಾರ ಹಾಗೂ ಕೆಲವರ ಅಧಃಪತನಕ್ಕೆ ಹೇಗೆ ಕಾರಣವಾಗಿದೆ ಎಂಬುದನ್ನು ಗಮನಿಸುತ್ತಿರಿ.

೨೨. **ಸೇ**ವೆಯನ್ನೇ ಜೀವನ ವಿಧಾನವಾಗಿ ಮಾಡಿಕೊಳ್ಳಿ. ಸೇವೆಯನ್ನು ಗಾಣದೆತ್ತಿನ ದುಡಿಮೆಯಂತೆ ನಿಮ್ಮ ಮೇಲೆ ಹೇರಲಾಗಿದೆ ಎಂದು ಭಾವಿಸಬೇಡಿ. ಬದಲಾಗಿ ಸೇವೆಯೇ ನಿಮ್ಮ ಜೀವನಧರ್ಮವಾಗಲಿ. ಸೇವೆಗೆ ಅತ್ಯವಶ್ಯವಾಗಿರುವುದು ತ್ಯಾಗ; ಆದ್ದರಿಂದ ತ್ಯಾಗ, ಬಲಿದಾನಗಳಿಗೆ ಸದಾ ಸಿದ್ಧರಾಗಿರಿ.

೨೩. **ಯಾ**ವುದೇ ಕೆಲಸವನ್ನು ದಕ್ಷತೆಯಿಂದ ಮಾಡುವುದು ನಿಸ್ಸಂದೇಹವಾಗಿ ಕರ್ಮಯೋಗಕ್ಕೆ ಸಹಕಾರಿಯಾಗಿರುತ್ತದೆ. ಹಾಗೆಂದಮಾತ್ರಕ್ಕೆ ಕರ್ಮಯೋಗವನ್ನು, ದಕ್ಷತೆಯಿಂದ ಕೆಲಸ ಮಾಡಿ ಪ್ರಾಪಂಚಿಕ ಜೀವನದಲ್ಲಿ ಯಶಸ್ಸು, ಜಯ ಸಾಧಿಸುವ ಒಂದು ತಂತ್ರ ಎಂದು ಬಗೆಯಬಾರದು. ಕರ್ಮಯೋಗವು ಆ ರೀತಿಯ ತಂತ್ರವಲ್ಲ. ಕೆಲಸದಲ್ಲಿನ ಜಯಾಪಜಯಗಳು ಇನ್ನೂ ಅನೇಕ ಅಂಶಗಳನ್ನು ಆಧರಿಸಿವೆ.

೨೪. **ಸೋ**ಲು, ನಿರಾಶೆ, ನೋವು, ಮೊದಲಾದವುಗಳು ಜೀವನದ ಅವಿಭಾಜ್ಯ ಅಂಗ. ಕರ್ಮಯೋಗಿಯು ಇವುಗಳಿಂದ ಹತಾಶನಾಗಬೇಕಿಲ್ಲ. ಖಿನ್ನನಾಗುವ ಬದಲು ಪ್ರಾಮಾಣಿಕವಾಗಿ ಸತತ ಪ್ರಯತ್ನ ಮಾಡಬೇಕು.

೨೫. **ಕ**ರ್ಮಯೋಗಿಯು ಸದಾ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಳ್ಳಬೇಕು. ಜಯ-ಅಪಜಯ, ಹೊಗಳಿಕೆ-ತೆಗಳಿಕೆಗಳಲ್ಲಿ ಆತನು ಸಮಚಿತ್ತನಾಗಿರಬೇಕು. ಈ ರೀತಿಯ ಆಂತರಿಕ ಸ್ಥಿರತೆಗೆ ಕರ್ಮಯೋಗಿಯಲ್ಲಿರಬೇಕಾದ ಅತ್ಯಂತ ಅವಶ್ಯವಾದ ಗುಣವೆಂದರೆ ತಿತಿಕ್ಷೆ ಅಥವಾ ಅದ್ಭುತ ಸಹನಾಶಕ್ತಿ.

೨೬. **ನಿ**ಮ್ಮ ಜೀವನದ ಕಷ್ಟ-ನಷ್ಟಗಳಿಗೆ, ಸೋಲು-ನೋವುಗಳಿಗೆ ಇತರರನ್ನು ದೂರಬೇಡಿ. "ಇತರರು ನಮ್ಮೊಂದಿಗೆ ನಡೆದುಕೊಳ್ಳುವ ರೀತಿ ಹಾಗೂ ನಮ್ಮ ಬಗ್ಗೆ ಅವರ ಮನೋಭಾವ, ನಾವು ಇತರರೊಂದಿಗೆ ನಡೆದುಕೊಳ್ಳುವ ರೀತಿ ಹಾಗೂ ಇತರರ ಕುರಿತು ನಾವು ತಾಳಿರುವ ಮನೋಭಾವವನ್ನು

ಆಧರಿಸಿದೆ"—ಎಂಬುದು ಜೀವನದ ಅತ್ಯಂತ ಮುಖ್ಯವಾದ ಸಾರ್ವಕಾಲಿಕ ನಿಯಮ. ನಮಗೆ ನೋವಾಗುವಂತೆ ಯಾರಾದರೂ ನಮ್ಮೊಡನೆ ವರ್ತಿಸಿದರೆ ಅದರ ನೈಜ ಕಾರಣವನ್ನು ನಮ್ಮಲ್ಲೇ ಅರಸಬೇಕು. ಶುದ್ಧವಾದ ನಡತೆ, ನಿಃಸ್ವಾರ್ಥ ಪ್ರೀತಿ ಹಾಗೂ ಸಜ್ಜನಿಕೆಯ ಮೂಲಕ ಇತರರಿಗೆ ನಮ್ಮ ಬಗ್ಗೆ ಇರುವ ತಪ್ಪು ತಿಳುವಳಿಕೆಯನ್ನು ಸರಿಪಡಿಸಬಹುದು.

೨೭.ಕೆಲಸದ ಕ್ಷೇತ್ರದಲ್ಲಿನ ಅತಿ ದೊಡ್ಡ ಸಮಸ್ಯೆಯೆಂದರೆ ನಮ್ಮ ಹಿರಿಯರ, ಕಿರಿಯರ ಹಾಗೂ ಜೊತೆಗಾರರೊಡನೆ ಹೊಂದಿಕೊಂಡು ಬದುಕುವುದು. ಕೆಲವರಿಗೆ ತಮ್ಮ ಹಿರಿಯರೊಡನೆ ಹೊಂದಿಕೊಳ್ಳುವುದು ಸುಲಭ, ಆದರೆ ತಮ್ಮ ಜೊತೆಗಾರರು ಹಾಗೂ ಕಿರಿಯರೊಡನೆ ಹೊಂದಿಕೊಳ್ಳುವುದು ಕಷ್ಟಕರವೆನಿಸಬಹುದು. ಇನ್ನು ಕೆಲವರಿಗೆ ತಮ್ಮ ಜೊತೆಗಾರರು ಹಾಗೂ ಕಿರಿಯರೊಡನೆ ಹೊಂದಿಕೊಳ್ಳುವುದು ಸುಲಭವಿರಬಹುದು, ಆದರೆ ಹಿರಿಯರೊಡನೆ ಹೊಂದಿಕೊಳ್ಳುವುದು ಸಮಸ್ಯೆಯಾಗಿರಬಹುದು. ಈ ಮೂರೂ ವರ್ಗದ ಜನರೊಡನೆ ಅನುಸರಿಸಿಕೊಂಡು ಹೋಗುವುದು ಪ್ರೌಢತೆಯ ಕುರುಹು.

೨೮.ಸಮಯ ನಿರ್ವಹಣೆ ಕರ್ಮಯೋಗದ ಅತಿಮುಖ್ಯ ಅಂಗ. ಕರ್ಮಯೋಗಿಯು ತನ್ನ ಎಲ್ಲ ಕೆಲಸಗಳನ್ನು ಸರಿಯಾದ ಸಮಯದಲ್ಲಿ, ಅತ್ಯಂತ ಶೀಘ್ರವಾಗಿ ಮಾಡಬೇಕು. ವಾರ್ತಾಪತ್ರಿಕೆ, ಕಥೆ, ಕಾದಂಬರಿಗಳನ್ನು ಓದುವುದು, ದೂರದರ್ಶನ ವೀಕ್ಷಿಸುವುದು, ಹರಟೆಹೊಡೆಯುವುದು ಮತ್ತಿನ್ನಿತರೆ ಸಮಯತಿನ್ನುವ ಚಟುವಟಿಕೆಗಳು ಒಂದು ಮಿತಿಯನ್ನು ಮೀರಿದರೆ ಕೇವಲ ಸಮಯ ನಷ್ಟವೊಂದೇ ಅಲ್ಲ, ನಮ್ಮ ಕಾರ್ಯದಕ್ಷತೆ ಹಾಗೂ ಏಕಾಗ್ರತೆಯನ್ನು ಅವು ಕ್ಷೀಣಿಸುತ್ತವೆ. ಶಿಸ್ತುಬದ್ಧವಾದ ದಿನಚರಿಯನ್ನು ಕಡ್ಡಾಯವಾಗಿ ಪಾಲಿಸುವುದು ಸಮಯದ ಸಮರ್ಥವಾದ ನಿರ್ವಹಣೆಗೆ ಅತ್ಯಂತ ಸಹಾಯಕಾರಿ.

೨೯.ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಹೇಳಿದ ಉಪದೇಶವನ್ನು ಸದಾ ನೆನಪಿನಲ್ಲಿಡಿ: "ಎಲ್ಲಿ ಹೇಗಿರಬೇಕೊ ಅಲ್ಲಿ ಹಾಗಿರಬೇಕು; ಯಾವಾಗ ಹೇಗಿರಬೇಕೊ ಆವಾಗ ಹಾಗೆಯೇ ಇರಬೇಕು; ಯಾರೊಡನೆ ಹೇಗಿರಬೇಕೊ ಅವರೊಡನೆ ಅಂತೆಯೇ ಇರಬೇಕು."

೩೦.ಎಲ್ಲ ಕೆಲಸಗಳನ್ನು ಪರಮಾತ್ಮನಲ್ಲಿ ಸಮರ್ಪಣ ಭಾವದಿಂದ ಮಾಡಬೇಕು. ಆದರೆ ಇದರರ್ಥ ಎಲ್ಲವೂ ವಿಧಿಯ ಕೈವಾಡ ಎಂದು ಕೈಚೆಲ್ಲಿ ಕೂರುವುದಾಗಲಿ, ಅಥವಾ ಮನಬಂದಂತೆ ವರ್ತಿಸುವ, ತಿಳಿವಳಿಕೆಯಿಲ್ಲದ ವ್ಯಕ್ತಿಗಳ ವಶಕ್ಕೆ ಕರ್ಮವನ್ನು ಬಿಟ್ಟುಬಿಡುವುದಾಗಲಿ ಅಲ್ಲ. ಎಲ್ಲಿ ಸಾಧ್ಯವೋ ಅಲ್ಲಿ ಅನುಭವಸ್ಥರ ಹಾಗೂ ತಿಳಿದವರ ಸಲಹೆಯನ್ನು ಕೇಳಬೇಕು. ನಮ್ಮ ಕಾರ್ಯಗಳ ಪೂರ್ವನಿಯೋಜಿತ ನಕ್ಷೆಯೊಂದನ್ನು ಮುಂಚಿತವಾಗಿಯೇ ತಯಾರಿಸಿಕೊಳ್ಳಬೇಕು ಹಾಗೂ ಅತಿ ಎಚ್ಚರಿಕೆಯಿಂದ ನಮ್ಮ ಕರ್ತವ್ಯವನ್ನು ನಿಭಾಯಿಸಬೇಕು. ಇವುಗಳೆಲ್ಲದರ ಜೊತೆಗೆ ವ್ಯಾಕುಲಚಿತ್ತರಾಗಿ ದೇವರನ್ನೂ ಪ್ರಾರ್ಥಿಸಬೇಕು ಮತ್ತು ಸನ್ನಿವೇಶಗಳನ್ನು ಅವು ಬಂದಂತೆ ಸ್ವೀಕರಿಸುತ್ತ ತಾಳ್ಮೆ ಹಾಗೂ ಭಗವಂತನಲ್ಲಿ ಸಮರ್ಪಣ ಭಾವದಿಂದ ಕಾರ್ಯನಿರತರಾಗಬೇಕು.

೩೧.ಅಂತಿಮವಾಗಿ, ವ್ಯಾವಹಾರಿಕ ಜೀವನದಲ್ಲಿ ಕರ್ಮ ಹಾಗೂ ಪೂಜೆ ಎರಡನ್ನೂ ಒಗ್ಗೂಡಿಸುವುದೇ ನಮ್ಮ ಮುಂದಿರುವ ದೊಡ್ಡ ಸವಾಲು. ಅಂದರೆ ಎಲ್ಲ ಕೆಲಸಗಳನ್ನು ಯಾಗ ಅಥವಾ ಯಜ್ಞದಂತೆ ಭಗವಂತನಿಗರ್ಪಿತವಾಗಿ ಮಾಡಬೇಕು ಮತ್ತು ಅದೇ ಸಮಯದಲ್ಲಿ ಭಗವಂತನೊಡನೆ ಒಂದು ಜೀವಂತವಾದ ಸಂಬಂಧವಿರಿಸಿಕೊಂಡು ಆಂತರಿಕ ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಲಾಟು ಮಹಾರಾಜರಿಗೆ (ಸ್ವಾಮಿ ಅದ್ಭುತಾನಂದರಿಗೆ) ನೀಡಿದ ಈ ಉಪದೇಶ ನಮಗೆ ಆಜೀವ ಪರ್ಯಂತ ದಾರಿದೀಪದಂತಿದೆ: "ಯಾಗ (ಕೆಲಸ) ಮತ್ತು ಯೋಗದಲ್ಲಿ ಜಾಗೃತನಾಗಿರಬೇಕು; ನಿದ್ರೆಯಲ್ಲಿಯೂ ಭಗವಂತನನ್ನು ಕರೆಯಬೇಕು. ಕೆಲಸದ ಮಧ್ಯೆ ಅವನನ್ನೇ ಆಶ್ರಯಿಸಬೇಕು ಮತ್ತು ಯಾವಾಗಲೂ ಅವನ ಸೇವೆಯಲ್ಲಿ ನಿರತನಾಗಿರಬೇಕು."

### ಸ್ವಾಮಿಯಂತೆ ಕರ್ಮ ಮಾಡಿ

ಕರ್ಮಯೋಗದ ಉಪದೇಶದ ಒಟ್ಟು ಸಾರಾಂಶವೇನೆಂದರೆ: ನೀನು ಸ್ವಾಮಿಯಂತೆ ಕರ್ಮಮಾಡು. ಗುಲಾಮನಂತೆ ಮಾಡಬೇಡ. ಅನವರತವೂ ಕಾರ್ಯಮಾಡು. ಆದರೆ ಜೀತಗಾರನಂತೆ ದುಡಿಯದಿರು. ಪ್ರತಿಯೊಬ್ಬನೂ ಕಾರ್ಯ ಮಾಡುವುದನ್ನು ನೀವು ನೋಡುವುದಿಲ್ಲವೇನು? ಯಾರೊಬ್ಬರೂ ವಿಶ್ರಾಂತಿಯಿಂದ ಇರುವುದು ಸಾಧ್ಯವಿಲ್ಲ; ಮನುಷ್ಯರಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಗುಲಾಮರಂತೆ ಕೆಲಸ ಮಾಡುತ್ತಾರೆ. ಅದರ ಪರಿಣಾಮ ದುಃಖ; ಎಲ್ಲ ಸ್ವಾರ್ಥಕರ್ಮ. ಸ್ವಾತಂತ್ರ್ಯ ಭಾವನೆಯಿಂದ ಕೆಲಸ ಮಾಡಿ; ಪ್ರೇಮ ಭಾವನೆಯಿಂದ ಕೆಲಸ ಮಾಡಿ. ಪ್ರೇಮವೆಂಬ ಪದದ ಅರ್ಥವನ್ನರಿಯುವುದು ತುಂಬ ಕಷ್ಟ. ಸ್ವಾತಂತ್ರ್ಯವಿಲ್ಲದವರೆಗೆ ಪ್ರೇಮ ಹುಟ್ಟುವುದಿಲ್ಲ. ಗುಲಾಮನಿಗೆ ನಿಜವಾದ ಪ್ರೇಮವಿರುವುದು ಸಾಧ್ಯವಿಲ್ಲ. ನೀವು ಜೀತಗಾರನೊಬ್ಬನನ್ನು ಕ್ರಯಕ್ಕೆ ಕೊಂಡು ಕತ್ತೆಯಂತೆ ಅವನಿಗೆ ಸಂಕೋಲೆಯನ್ನು ಹಾಕಿ, ನಿಮಗಾಗಿ ದುಡಿಯುವಂತೆ ಮಾಡಿದರೆ ಅವನು ಕೆಲಸ ಮಾಡುವನೇ ಹೊರತು, ಅವನಿಗೆ ಕೆಲಸದಲ್ಲಾಗಲಿ, ನಿಮ್ಮಲ್ಲಾಗಲಿ ಪ್ರೇಮವಿರದು.

– ಸ್ವಾಮಿ ವಿವೇಕಾನಂದ